**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ.313/2015**

| | | |
|---|---|---|
| ಹೆಸರು | ಶೋಭಾ | ಪಿಡಬ್ಲ್ಯೂ-11<br>ಸಿಡಬ್ಲ್ಯೂ -7 |
| ಗಂಡನ ಹೆಸರು | ಕೆ ವೀರಣ್ಣ | |
| ವಯಸ್ಸು | 57 ವರ್ಷ | |
| ಉದ್ಯೋಗ | ಅಂಗನವಾಡಿ ಟೀಚರ್ | ದಿ: **15.11.2021** |
| ವಾಸ ಸ್ಥಳ | ಅಮರಾವತಿ, ಹರಿಹರ | |
| ಮುಖ್ಯ ವಿಚಾರಣೆ | ಸಹಾಯಕ ಸರ್ಕಾರಿ ಅಭಿಯೋಜಕರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ನಾನು ಅಮರಾವತಿ ಹಳೆಗ್ರಾಮದಲ್ಲಿ ಸನ್ 1995 ರಿಂದ ಇಲ್ಲಿಯವರೆಗೆ ಅಂಗನವಾಡಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಆರೋಪಿ ಗೊತ್ತು. ಸನ್ 2010 ರಲ್ಲಿ ಬಿಳಸನೂರು ಗ್ರಾಮದ ಆರೋಗ್ಯ ಕೇಂದ್ರದಲ್ಲಿ ಸೆಕ್ಟರ್ ಮೀಟಿಂಗ್ ಇತ್ತು. ನಾನು ಸದರಿ ಮೀಟಿಂಗ್ ನಲ್ಲಿ ಹಾಜರಿದ್ದೆನು. ಸದರಿ ಮೀಟಿಂಗ್ ಗೆ ಆರೋಪಿ ಬಂದು ಇನ್ಸುರೆನ್ಸ ಮಾಡುವಂತೆ ನಮಗೆ ಕೇಳಿಕೊಂಡಿರುತ್ತಾನೆ. ಸದರಿ ಇನ್ಸುರೆನ್ಸ ನ ಹೆಸರು ಭೂಮಿಕಾ ಮೈಕ್ರೊ ಇನ್ಸುರೆನ್ಸ ಅಂತಾ ಇರುತ್ತದೆ. ಸದರಿ ಭೂಮಿಕಾ ಮೈಕ್ರೊ ಇನ್ಸುರೆನ್ಸ ಕಂಪನಿಯಲ್ಲಿ ಆರೋಪಿ ತಾನು ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದುದಾಗಿ ಹೇಳಿರುತ್ತಾನೆ . ಸದರಿ ಇನ್ಸುರೆನ್ಸ ಕಂಪನಿಯ ಏಜೆಂಟ್ ರಾಗಿ ಪಾಲಿಸಿಯನ್ನು ಮಾಡಿಸುವಂತೆ ನಮಗೆ ಕೇಳಿಕೊಂಡಿದ್ದು ಸದರಿ ಪಾಲಿಸಿಯಲ್ಲಿ ಹಣ ಹೂಡಿದರೆ ರೂ 100/- ಕ್ಕೆ 6 ರಂತೆ ಕಮೀಷನ್ ಕೊಡುವುದಾಗಿಯೂ ಸಹ ಆರೋಪಿ ನಮಗೆ ಹೇಳಿರುತ್ತಾನೆ. ಕಾರಣ ನಾವು ಜನಕ್ಕೆ ಪಾಲಿಸಿ ಬಗ್ಗೆ ಹೇಳಿ ಸುಮಾರು 5 ಜನರ ಪಾಲಿಸಿ ಮಾಡಿಸಿರುತ್ತೇನೆ. ಸದರಿ ಪಾಲಿಸಿದಾರರಿಂದ ಹಣ ಸಂಗ್ರಹಿಸಿಕೊಂಡು ಹರಿಹರ ಪಟ್ಟಣದ ಪ್ರಗತಿ ಗ್ರಾಮೀಣ ಬ್ಯಾಂಕಿನ ಮೇಲಿರುವ ಆರೋಪಿಯ ಆಫೀಸ್ ನಲ್ಲಿ ಹಣ ಕಟ್ಟುತ್ತಿದ್ದೆವು. ಸದರಿ ಆರೋಪಿಯ ಕಂಪನಿಯಿಂದ ನನಗೆ ಏಜೇಂಟ್ ಕೋಡ್ ನಂಬರ್ 6 ಎಂದು ಕೊಟ್ಟಿದ್ದರು. ಆರೋಪಿ 10 ವರ್ಷಗಳ ನಂತರ ಪಾಲಿಸಿದಾರರು ಹೂಡಿದ ಹಣ ದುಪ್ಪಟ್ಟು ಆಗುತ್ತದೆ ಒಂದು ವೇಳೆ ಪಾಲಿಸಿದಾರರು ಸದರಿ 10 ವರ್ಷಗಳ ಒಳಗೆ ಮರಣ ಹೊಂದಿದರೆ ಹಣ ಮರಳಿ ಕೊಡುತ್ತೇವೆ ಎಂದೂ ಸಹ ಹೇಳಿದ್ದನು.

ನಾವು ಸದರಿ ಪಾಲಿಸಿಗಳಿಗೆ ಸಂಬಂಧಪಟ್ಟಂತೆ ಆರೋಪಿ ಹತ್ತಿರ ಹಣ ಕಟ್ಟುತ್ತಿದ ಬಗ್ಗೆ ಆರೋಪಿ ನಮಗೆ ಪಾಸ್ ಪುಸ್ತಕಗಳನ್ನು ವಿತರಿಸಿದ್ದನು. ನಾನು ಒಟ್ಟು 5 ಪಾಲಿಸಿದಾರರಿಗೆ ಸಂಬಂಧಪಟ್ಟಂತೆ 18 ಸಾವಿರ ರೂಪಾಯಿ ಹಣವನ್ನು ಆರೋಪಿ ಹತ್ತಿರ ಕಟ್ಟಿರುತ್ತೇನೆ. ಆರೋಪಿ ತಾನು ನಮ್ಮ ಕಡೆಯಿಂದ ಪಡೆದ ಹಣಕ್ಕೆ ಚಿಕ್ಕದಾದ ಸ್ಲಿಪ್ ಅನ್ನು ಕೊಡುತ್ತಿದ್ದು ನಮಗೆ ಗುಮಾನಿ ಬಂದು ಶಿವಮೊಗ್ಗದ ಎಲ್ ಐ ಸಿ ಕಛೇರಿಗೆ ಹೋಗಿದ್ದು ಆ ಸಮಯದಲ್ಲಿ ಆರೋಪಿ ನಾವು ಅವನ ಹತ್ತಿರ ಕಟ್ಟಿದಷ್ಟು ಹಣವನ್ನು ಆತ

ಕಛೇರಿಯಲ್ಲಿ ಕಟ್ಟದಿರುವ ಬಗ್ಗೆ ಗೊತ್ತಾಗಿರುತ್ತದೆ. ಆ ಬಗ್ಗೆ ನಾವು ಶಿವಮೊಗ್ಗ ಕಛೇರಿಯಲ್ಲಿ ಅಧಿಕಾರಿಗಳಿಗೆ ಆರೋಪಿಯ ವಿರುದ್ಧ ಹೇಳಿಕೆ ನೀಡಿರುತ್ತವೆ. ನಂತರ ಆರೋಪಿ ಹರಿಹರದಲ್ಲಿರುವ ಆಫೀಸನ್ನೇ ಬಂದ್ ಮಾಡಿಕೊಂಡು ಹೋಗಿರುತ್ತಾನೆ. ಈಗ ನೋಡುತ್ತಿರುವ ದಾಖಲೆ ನಾನು ಶಿವಮೊಗ್ಗ ಎಲ್ ಐ ಸಿ ಬ್ರ್ಯಾಂಚ್ ಮ್ಯಾನೇಜರ್ ರವರಿಗೆ ಕೊಟ್ಟ ಅರ್ಜಿಯಾಗಿರುತ್ತದೆ. ಅದನ್ನು ನಿಪಿ –10 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ –10 (ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಕಂಪ್ಯೂಟರ್ ಜೆನರೇಟೆಡ್ ಪ್ರತಿಯು ನಾನು ಪಾಲಿಸಿದಾರರ ವಿವರವನ್ನು ಭರ್ತಿ ಮಾಡಿ ನೀಡಿರುವ ದಾಖಲೆಯಾಗಿರುತ್ತದೆ. ಅದನ್ನು ನಿಪಿ –11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ತಾನು ಮಾಡಿದ ಪಾಲಿಸಿದಾರರ ಪಾಸ್ ಪುಸ್ತಕಗಳನ್ನು ಹಾಜರುಪಡಿಸಲು ಸಮಯಾವಕಾಶ ಕೋರುತ್ತಿದ್ದು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆಎಂಎಫ್‌ಸಿ, ಹರಿಹರ.